( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.17/2016

ದಿನಾಂಕಃ 17-01-2021, ಪಿ ಡಬ್ಲ್ಯೂ–2

ಪಾಟೀ ಸವಾಲು ಃ ಶ್ರೀ ಜಿ ಜಿ ಆರ್ ವಕೀಲರಿಂದಃ

ನಾನು ನನ್ನ ತಂದೆಗೆ ಒಬ್ಬಳೇ ಮಗಳು. ನಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ದ್ವಿತೀಯ ಪಿ ಯು ಸಿ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ-3 ನ್ನು ಬರೆದುಕೊಂಡು ಡಿ ಸಿ ಲೋಕನಾಥಸ್ವಾಮಿ ಎಂಬ ಸಾಕ್ಷಿದಾರರು ಹಾಜರಿದ್ದರು, ಮತ್ತೆ ಯಾರು ಹಾಜರಿದ್ದರು ಎಂದು ನನಗೆ ನೆನಪಿಲ್ಲ. ಅನಂತ ಎಂಬುವವರು ನಿಪಿ-3 ನ್ನು ಬರೆದಿರುತ್ತಾರೆ. ನಿಪಿ-3 ರ ಒಕ್ಕಣೆಗಳನ್ನು ನಾನು ಮತ್ತು ನನ್ನ ತಾಯಿ ಹೇಳಿ ಬರೆಸಿರುತ್ತೇವೆ ಎಂದರೆ ಸಾಕ್ಷಿಯು ಪ್ರತಿವಾದಿ ಬರೆಸಿ ನಮಗೆ ವಿಚಾರಗಳನ್ನು ತಿಳಿಸಿರುತ್ತಾರೆ. ಪ್ರತಿವಾದಿ ನಮಗೆ ಹೇಳಿದ ನಂತರ ನಾವು ನಿಪಿ-3 ನ್ನು ಓದಿಲ್ಲ. ಪ್ರತಿವಾದಿ ನಿಪಿ-3 ರ ಒಕ್ಕಣೆಯನ್ನು ಹೇಳಿದ ದಿನವೇ ನೊಂದಾಣಿ ಆಗಿಲ್ಲ, ಬೇರೆ ದಿನ ನೊಂದಾಣಿ ಆಗಿದೆ. ನಿಪಿ-3 ರ ಒಕ್ಕಣೆಯನ್ನು ತಿಳಿಸಿದ ಮಾರನೆಯ ದಿನ ನಿಪಿ-3 ನೋಂದಾಣಿ ಆಗಿದೆ. ಆ ದಿನ ನಾವು ನಿಪಿ-3 ರ ಒಕ್ಕಣೆಗಳನ್ನು ಸಂಪೂರ್ಣವಾಗಿ ಓದಿಲ್ಲ.

ಕಟ್ಟಡ ಕಾಮಗಾರಿ ಕಳಪೆ ಮಾಡಿರುವ ವಿಚಾರ ಗೊತ್ತಾಗಿ ನಾವು ಪ್ರತಿವಾದಿಯನ್ನು ಪ್ರಶ್ನಿಸಿದಾಗ ಪ್ರತಿವಾದಿ ಉಡಾಫೆ ಉತ್ತರ ಕೊಟ್ಟ ನಂತರ ಒಂದು ವಾರದ ಒಳಗೆ ನಾವು ನಿಪಿ-3 ನ್ನು ಪರಿಶೀಲನೆ ಮಾಡಿರುತ್ತೇವೆ. ನಿಪಿ-3 ನ್ನು ನೊಂದಾಣಿ ಮಾಡಿದ 3 ವರ್ಷಗಳ ನಂತರ ನಾವು ಕಟ್ಟಡದ ಬಳಿ ಹೋದೆವು. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿ ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ನಾವು ಕಟ್ಟಡದ ಬಳಿ ಹೋದಾಗ ಗೋಡೆ ಕೆಲಸ ಪೂರ್ಣ ಗೊಂಡು ಮೇಲ್ಛಾವಣಿ ಹಾಕುತ್ತಿದ್ದರು. ಆ ಸಮಯದಲ್ಲಿ ಕಟ್ಟಡ ಪರವಾನಿಗೆ ಯಾರ ಹೆಸರಿನಲ್ಲಿ ಪಡೆಯಲಾಗಿತ್ತು ಎಂದು ನಾನು ಪರಿಶೀಲನೆ ಮಾಡಿಲ್ಲ.

ಕಟ್ಟಡ ಪರಿಶೀಲನೆ ಮಾಡುವ ಸಮಯಕ್ಕೆ ಪ್ರತಿವಾದಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ತೊಂದರೆ ಇತ್ತು. ನಾನು ಮತ್ತು ನನ್ನ ತಾಯಿ ಪ್ರತಿವಾದಿಗೆ ನಿಪಿ-3 ರ ರೀತ್ಯಾ ಮಾರಾಟ ಮಾಡುವ ಹಕ್ಕನ್ನು ನೀಡಿರಲಿಲ್ಲ ಎಂಬ ವಿಚಾರವನ್ನು ನಿಪಿ-9 ನ್ನು ಮಾಡುವ ಸಮಯದಲ್ಲಿ ಉಪನೊಂದಾಣಾಧಿಕಾರಿಗಳ ಗಮನಕ್ಕೆ ತಂದಿರುತ್ತೇವೆ.

ನಿಪಿ-3 ಆದ 4 ವರ್ಷಗಳ ನಂತರ ಅಂದರೆ ದಿಃ08-01-2016 ರಂದು ಪ್ರತಿವಾದಿಗೆ ತಿಳುವಳಿಕೆ ಪತ್ರ ಕೊಟ್ಟಿರುತ್ತೇವೆ. ನಿಪಿ-3 ನ್ನು ನೊಂದಾಣಿ ಆದ 3 ವರ್ಷಗಳ ನಂತರ ಓದಿರುತ್ತೇನೆ. ನಿಪಿ-3 ನ್ನು ಪರಿಶೀಲನೆ ಮಾಡಿದ ಕೂಡಲೇ ನಾನು ಪ್ರತಿವಾದಿಗೆ ನೋಟೀಸು ಕೊಡಲು ತೊಂದರೆ ಇತ್ತು.

ಸಾಕ್ಷಿಯು ಮುಂದುವರೆದು ನಾವು ಪಂಚಾಯತಿಯಿಂದ ಪರವಾನಿಗೆ ಪಡೆದು ಕಟ್ಟಡ ನಿರ್ಮಾಣ ಮಾಡಲು ಹಕ್ಕನ್ನು ನೀಡಿರುತ್ತೇವೆ , ಆದರೆ ಯಾವುದೇ ಮಾರಾಟದ ಹಕ್ಕನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನೋಟೀಸು ಕೊಟ್ಟ ಒಂದು ವಾರದ ಒಳಗೆ ಈ ದಾವೆಯನ್ನು ಹೂಡಿರುತ್ತೇವೆ. ಸದರಿ ನೋಟೀಸನ್ನು ಪ್ರತಿವಾದಿ ತೆಗೆದುಕೊಂಡಿಲ್ಲ. ನಿಪಿ-20 ರ ಪ್ರಕಾರ ನಾನು ಕಳುಹಿಸಿದ ನೋಟೀಸು ಪ್ರತಿವಾದಿಗೆ ದಿಃ13-01-2016 ರಂದು ಜಾರಿಯಾಗಿದೆ ಎಂದರೆ ಸರಿ. ನೋಟೀಸು ಜಾರಿಯಾದ ನಂತರ ಪ್ರತಿವಾದಿ ತಮ್ಮ ಉತ್ತರವನ್ನು ಕೊಡಲು ನಾವು ಸಮಯಾವಕಾಶ ಕೊಟ್ಟಿದ್ದೆವು. ಪ್ರತಿವಾದಿಗೆ ನೋಟೀಸು ಜಾರಿಯಾದ ಒಂದು ವಾರದ ನಂತರ ಈ ದಾವೆಯನ್ನು ಹೂಡಿದ್ದೇವೆ.

ನಿಪಿ-9 ರ ವಿಚಾರಗಳನ್ನು ಪ್ರತಿವಾದಿಗೆ ನೋಟೀಸು ಮೂಲಕ ತಿಳಿಸಿರುತ್ತೇವೆ. ಸದರಿ ನೋಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ಪ್ರಶ್ನೆಃ ನಿಪಿ-9 ನ್ನು ಮಾಡುವ ಪೂರ್ವದಲ್ಲಿ ನ್ಯಾಯಾಲಯಕ್ಕೆ ದಾವಾ ಹೂಡಿ ಪರಿಹಾರ ಕೋರಲು ತೊಂದರೆ ಇತ್ತಾ ?

ಉತ್ತರಃ ಇತ್ತು.

ನಿಪಿ-9 ನ್ನು ಅನಂತ ಎಂಬುವವರು ಬರೆದಿರುತ್ತಾರೆ. ನಿಪಿ-9 ನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ಸಿ ವಿ ನಾಗರಾಜು ಎಂಬ ವಕೀಲರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-9 ನ್ನು ಬರೆದ ಸಿ ವಿ ನಾಗರಾಜು ಎಂಬ ವಕೀಲರು ಈ ದಾವೆಯನ್ನು ನನ್ನ ಪರವಾಗಿ ನಡೆಸುತ್ತಿದ್ದಾರೆ ಎಂದರೆ ಸರಿ. ನಿಪಿ-9 ಕ್ಕೆ ಸಾಕ್ಷಿದಾರರಾಗಿ ಬಿ ಸಿ ಲೋಕನಾಥಸ್ವಾ ಮಿ ಮತ್ತು ಕೆ ಎನ್ ನಾಗೇಂದ್ರ ಎಂಬುವವರನ್ನು ಕರೆದುಕೊಂಡು ಹೋಗಿದ್ದೆವು. ಸದರಿಯವರು ಬಸವನಹಳ್ಳಿಗ್ರಾಮದವರು. ಸದರಿಯವರು ನನ್ನ ಜೊತೆ ವಿಶ್ವಾಸದಲ್ಲಿ ಇದ್ದಾರೆ ಎಂದರೆ ಸರಿ.

ನಿಪಿ-3 ರಲ್ಲಿ ಕಟ್ಟಡ ಪೂರ್ಣಗೊಳಿಸಿ ನಮಗೆ ವಾಪಸ್ಸು ನೀಡಬೇಕೆಂದು ಬರೆಸಿರುತ್ತೇವೆ. ಕಟ್ಟಡ ಪೂರ್ಣ ಗೊಂಡ ನಂತರ ನಮಗೆ ವಾಪಸ್ಸು ನೀಡಬೇಕೆಂದು ನಾನು ಕೇಳಿದ್ದೀರಾ ಎಂದರೆ ನಾವು ಕಟ್ಟಡವನ್ನು ಪರಿಶೀಲಿಸಿದ ನಂತರ ಪ್ರತಿವಾದಿ ನಮಗೆ ಉಡಾಫೆ ಉತ್ತರವನ್ನು ನೀಡಿ ಕಟ್ಟಡವನ್ನು ನಮಗೆ ವಾಪಸ್ಸು ನೀಡಲು ಸಿದ್ಧರಿರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ-3 ರಲ್ಲಿ ನನ್ನ ತಾಯಿಯ ಹೆಸರಿಗೆ ಖಾತೆ ವರ್ಗಾಯಿಸುವ ಬಗ್ಗೆ ಉಲ್ಲೇಖಿಸಿಲ್ಲ. ನಿಪಿ-3 ನ್ನು ನಾವು ದಾವಾ ಹೂಡುವ ಮುಂಚೆ ಓದಿ ತಿಳಿದುಕೊಂಡಿದ್ದೇನೆ. ಕಟ್ಟಡವನ್ನು ಕಟ್ಟಲು ಪ್ರತಿವಾದಿಗೆ 3 ಲಕ್ಷ ಹಣವನ್ನು ನಗದು ರೂಪದಲ್ಲಿ ನಮ್ಮ ಮನೆಯಲ್ಲಿ ಕೊಟ್ಟಿದ್ದೇವೆ. ಹಣ ಕೊಡುವಾಗ ನಾನು ಮತ್ತು ನನ್ನ ತಾಯಿ ಇದ್ದೆವು. ಆ ಸಮಯದಲ್ಲಿ ಬಿ ಸಿ ಲೋಕನಾಥಸ್ವಾಮಿ ಮತ್ತು ಕೆ ಎನ್ ನಾಗೇಂದ್ರ ರವರು ಇರಲಿಲ್ಲ. ಬಿ ಸಿ ಲೋಕನಾಥಸ್ವಾಮಿ ಮತ್ತು ಕೆ ಎನ್ ನಾಗೇಂದ್ರರವರಿಗೆ ನಮ್ಮ ಹಣಕಾಸಿನ ವ್ಯವಹಾರ ಗೊತ್ತಿತ್ತು.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು